## <u>ಸಿವಿಲ್ ಜಡ್ಜ್ ಮತ್ತು ಪ್ರ ದ ನ್ಯಾದಂ.ರವರ ನ್ಯಾಯಾಲಯ, ಹೆಚ್.ಡಿ.ಕೋಟೆ</u>

<u>ಸಿ.ಸಿ. ನಂ.484/2023</u>

ಫಿರ್ಯಾದಿ : ಸರ್ಕಾರದ ಪರವಾಗಿ ಹೆಚ್.ಡಿ. ಕೋಟೆ ಪೋಲೀಸ್ ಠಾಣೆ

– ವಿರುದ್ಧ –

ಆರೋಪಿಗಳು : 1. ಶ್ರೀಮತಿ ಚೌಡಮ್ಮ ಕೋಂ ಚನ್ನನಾಯಕ
40 ವರ್ಷ, ವಾಸಃ ವಿಶ್ವನಾಥಯ್ಯ ಕಾಲೋನಿ,
ಹೆಚ್.ಡಿ. ಕೋಟೆ ಟೌನ್,
ಮೈಸೂರು ಜಿಲ್ಲೆ.

2. ಶ್ರೀಮತಿ ವೇದಾವತಿ ಕೋಂ ಪುಟ್ಟಬಸವ
37 ವರ್ಷ, ವಾಸಃ ಚನ್ನಪಟ್ಟಣ ಗ್ರಾಮ,
ನಂಜನಗೂಡು ತಾಲ್ಲೂಕು,
ಮೈಸೂರು ಜಿಲ್ಲೆ.

3. ಶ್ರೀಮತಿ ಪೂರ್ಣಿಮ ಕೋಂ ಶಿವಕುಮಾರ್
34 ವರ್ಷ, ವಾಸಃ ವಿಶ್ವನಾಥಯ್ಯ ಕಾಲೋನಿ,
ಹೆಚ್.ಡಿ. ಕೋಟೆ ಟೌನ್,
ಮೈಸೂರು ಜಿಲ್ಲೆ.

## <u>ದೋಷಾರೋಪಣೆ</u>

ಶ್ರೀ ಸುರೇಶ.ಎಸ್.ಎನ್., ಬಿ.ಎ., ಎಲ್.ಎಲ್.ಬಿ, ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ., ಹೆಚ್.ಡಿ.ಕೋಟೆ ಆದ ನಾನು ಆರೋಪಿಗಳಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ದಿನಾಂಕ 07.04.2022 ರಂದು ಹೆಚ್.ಡಿ. ಕೋಟೆ ಪೊಲೀಸ್ ಠಾಣಾ ಸರಹದ್ದು, ಹೆಚ್.ಡಿ. ಕೋಟೆ ಟೌನಿನ ವಿಶ್ವನಾಥ ಕಾಲೋನಿಯಲ್ಲಿರುವ 1 ನೇ ಆರೋಪಿಯಾದ ನೀವು 3 ನೇ

ಆರೋಪಿಯ ಮಧ್ಯಸ್ಥಿಕೆಯಲ್ಲಿ ನಿಮಗೆ ದಿನಾಂಕ 05.04.2023 ರಂದು ಜನಿಸಿದ್ದ ಹೆಣ್ಣುಮಗುವನ್ನು ಕಾನೂನು ಬಾಹಿರವಾಗಿ 2 ನೇ ಆರೋಪಿಗೆ ಕೊಡಲು ಪ್ರಯತ್ನಿಸಿದ್ದು, ಆ ಮೂಲಕ ಆರೋಪಿಗಳಾದ ನೀವು ಭಾ.ದಂ.ಸಂ. ಕಲಂ.511 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯ ಪರಿಮಿತಿಯೊಳಗೆ ಮಾಡಿರುತ್ತೀರಿ.

ಈ ಮೇಲಿನ ದೋಷಾರೋಪಣೆಗಳಿಗಾಗಿ ಆರೋಪಿಗಳಾದ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆಗೊಳಪಡತಕ್ಕದೆಂದು ನಿರ್ದೇಶಿಸಿರುತ್ತೇನೆ.

(ಆರೋಪಿಗಳಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಈ ದೋಷಾರೋಪಣೆಯನ್ನು ಓದಿ ತಿಳಿಸಿ ಹೇಳಲಾಗಿ ಸದರಿ ಆರೋಪಿಗಳು ಹೇಳಿದ ಉತ್ತರಗಳನ್ನು ಯಥಾವತ್ತಾಗಿ ಬರೆದುಕೊಳ್ಳಲಾಯಿತೆಂದು ದೃಢೀಕರಿಸಿರುತ್ತೇನೆ.)

ದಿನಾಂಕಃ

(ಸುರೇಶ.ಎಸ್.ಎನ್.)
ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.
ಹೆಚ್.ಡಿ. ಕೋಟೆ.